### ನಾಲ್ಕು ಬಾರಿ ಆಯ್ಕೆಯಾದ ಹಿರಿತನಕ್ಕೆ ಬೆಲೆ । ಆನಂದ ಮಾಮನಿ ಜತೆ ಪೈಪೋಟಿ

# ಡೆಪ್ಯೂಟಿ ಸ್ಪೀಕರ್, ಮುಂಚೂಣಿಯಲ್ಲಿ ಜ್ಞಾನೇಂದ್ರ

▫ ವಿಕ ಸುದ್ದಿಲೋಕ ಬೆಂಗಳೂರು

ಪಕ್ಷ ನಿಷ್ಠೆ ಹಾಗೂ ಹಿರಿತನದ ಹಿನ್ನೆಲೆಯಲ್ಲಿ ತೀರ್ಥಹಳ್ಳಿ ಕ್ಷೇತ್ರದ ಶಾಸಕ ಆರಗ ಜ್ಞಾನೇಂದ್ರ ಅವರು ವಿಧಾನಸಭೆ ಡೆಪ್ಯೂಟಿ ಸ್ಪೀಕರ್ ಸ್ಥಾನಕ್ಕೆ ಸಹಜ ಆಯ್ಕೆಯಾಗುವ ಸಾಧ್ಯತೆಯಿದೆ.

ಉಪಸಭಾಧ್ಯಕ್ಷರ ಸ್ಥಾನಕ್ಕೆ ಕೃಷ್ಣಾರೆಡ್ಡಿ ರಾಜೀನಾಮೆ ನೀಡಿದ್ದರಿಂದ ಹೊಸಬರನ್ನು ಆಯ್ಕೆ ಮಾಡಬೇಕಿದೆ. ಈ ಮೊದಲು ಈ ಹುದ್ದೆಗೆ ಸವದತ್ತಿ ಯಲ್ಲಮ್ಮ ಕ್ಷೇತ್ರದ ಶಾಸಕ ಆನಂದ್ ಮಾಮನಿ ಹೆಸರು ಕೇಳಿಬಂದಿತ್ತು. ಆದರೆ, ಇದೀಗ ಜ್ಞಾನೇಂದ್ರ ಆಯ್ಕೆಗೆ ಒಲವು ತೋರಲಾಗಿದೆ. ಯಾಕೆಂದರೆ ಆರಗ ಜ್ಞಾನೇಂದ್ರ ಪಕ್ಷದ ಹಿರಿಯ ಮುಖಂಡರಾಗಿದ್ದರೂ ಸ್ಥಾನಮಾನಕ್ಕಾಗಿ ಯಾವತ್ತೂ ಲಾಬಿ ಮಾಡಿದವರಲ್ಲ. ಇದು ಅವರ ಬಗ್ಗೆ ಪಕ್ಷದ ವಲಯದಲ್ಲಿ ಸದಭಿಪ್ರಾಯ ಮೂಡಲು ಕಾರಣವಾಗಿದೆ.

ಆರಗ ಜ್ಞಾನೇಂದ್ರ ತೀರ್ಥಹಳ್ಳಿಯಿಂದ 1994ರಲ್ಲಿ ಮೊದಲ ಬಾರಿ ಆಯ್ಕೆಯಾಗಿದ್ದರು. ಅವರ ಬ್ಯಾಚ್‌ನ ಬಹುತೇಕ ಶಾಸಕರು ಸಚಿವರಾಗಿದ್ದಾರೆ. ಆದರೆ, 2008 ಹಾಗೂ 2013ರ ಚುನಾವಣೆಲ್ಲಿ ಸೋತಿದ್ದರಿಂದ ಅವರಿಗೆ ಸಚಿವರಾಗುವ ಅವಕಾಶ ಸಿಕ್ಕಿರಲಿಲ್ಲ. ಈ ಬಾರಿ ಮಂತ್ರಿಯಾಗುವ ನಿರೀಕ್ಷೆಯಿದ್ದರೂ ಶಿವಮೊಗ್ಗ ಜಿಲ್ಲೆಯಿಂದ ಕೆ.ಎಸ್.ಈಶ್ವರಪ್ಪ ಸಂಪುಟದಲ್ಲಿದ್ದಾರೆ. ಸಿಎಂ ಅವರೂ ಇದೇ ಜಿಲ್ಲೆಗೆ ಸೇರಿದ್ದರಿಂದ ಶಿವಮೊಗ್ಗ ಜಿಲ್ಲೆಯಿಂದ ಮತ್ತೊಬ್ಬರನ್ನು ಮಂತ್ರಿ ಮಾಡುವುದು ಕಷ್ಟಸಾಧ್ಯ. ಈ ನಿಟ್ಟಿನಲ್ಲಿ ಜ್ಞಾನೇಂದ್ರ ಕೂಡ ಯತ್ನ ನಡೆಸಿದವರಲ್ಲ. ಹಾಗಾಗಿ ಅವರಿಗೆ ಡೆಪ್ಯೂಟಿ ಸ್ಪೀಕರ್ ಸ್ಥಾನ ನೀಡುವುದು ಔಚಿತ್ಯಪೂರ್ಣವೆಂಬ ಅಭಿಪ್ರಾಯ ಪಕ್ಷದಲ್ಲಿ ಇದೆ. ಈ ಕಾರಣದಿಂದ ಉಪ ಸಭಾಧ್ಯಕ್ಷರಾಗಿ ಅವರನ್ನು ಆಯ್ಕೆ ಮಾಡುವ ಸಾಧ್ಯತೆ ಜಾಸ್ತಿಯಿದೆ.

- ಯಾವುದೇ ಸ್ಥಾನಮಾನಕ್ಕೆ ಬೇಡಿಕೆ ಇಟ್ಟವರಲ್ಲ
- ಪಕ್ಷ ನಿಷ್ಠೆಯಲ್ಲಿ ಅಚಲವಾದ ನಂಬಿಕೆ
- ಎಲ್ಲಾ ಶಾಸಕರ ಜತೆ ಉತ್ತಮ ಒಡನಾಟ



ಬೆಳಗಾವಿಯಲ್ಲಿ ಹೆಚ್ಚಿನ ಪ್ರಾತಿನಿಧ್ಯ: ಬೆಳಗಾವಿ ಜಿಲ್ಲೆಗೆ ಸರಕಾರ ಈಗಾಗಲೇ ಹೆಚ್ಚಿನ ಪ್ರಾತಿನಿಧ್ಯ ನೀಡಲಾಗಿದೆ. ಈ ಅಂಶವೂ ಜ್ಞಾನೇಂದ್ರ ಆಯ್ಕೆಯ ಪ್ರಸ್ತಾವಕ್ಕೆ ಪುಷ್ಟಿ ನೀಡಿದೆ. ಬೆಳಗಾವಿಯಿಂದ ಸವದಿ, ರಮೇಶ್ ಜಾರಕಿಹೊಳಿ, ಶಶಿಕಲಾ ಜೊಲ್ಲೆ ಸಂಪುಟದಲ್ಲಿದ್ದಾರೆ. ಬಾಲಚಂದ್ರ ಜಾರಕಿಹೊಳಿ ಹಾಗೂ ಮಹೇಶ್ ಕುಮಠಳ್ಳಿಗೆ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ನೀಡಲಾಗಿದೆ. ಜತೆಗೆ ಮೇಲ್ಮನೆಯಲ್ಲಿ ಆಡಳಿತ ಪಕ್ಷದ ಮುಖ್ಯ ಸಚೇತಕರಾಗಿ ಬೆಳಗಾವಿ ಜಿಲ್ಲೆಯವರೇ ಆದ ಮಹಾಂತೇಶ ಕವಟಗಿಮಠ ಕಾರ್ಯ ನಿರ್ವಹಿಸುತ್ತಿದ್ದಾರೆ. ಮುಂದಿನ ಬಾರಿ ಸಂಪುಟ ವಿಸ್ತರಿಸುವಾಗ ಹಿರಿಯ ಶಾಸಕ ಉಮೇಶ ಕತ್ತಿ ಸಚಿವರಾಗುವುದೂ ಖಚಿತ. ಇದರ ನಡುವೆ ಮಾಮನಿ ಅವರಿಗೂ ಸ್ಥಾನಮಾನ ನೀಡುವುದು ಸೂಕ್ತವಲ್ಲ ಎಂಬ ಅಭಿಪ್ರಾಯವನ್ನು ಶಾಸಕರುಗಳೇ ನೀಡಿದ್ದಾರೆ ಎನ್ನಲಾಗಿದೆ.

ಇನ್ನು ಬೆಳಗಾವಿ ಕಂದಾಯ ವಿಭಾಗಕ್ಕೆ ಸೇರಿದ ಉತ್ತರ ಕನ್ನಡ ಜಿಲ್ಲೆಯವರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಸ್ಪೀಕರ್ ಆಗಿದ್ದಾರೆ. ಹಾಗಾಗಿ ಉಪ ಸಭಾಧ್ಯಕ್ಷರ ಸ್ಥಾನ ದಕ್ಷಿಣ ಕರ್ನಾಟಕ ಭಾಗದವರಿಗೆ ನೀಡಿದರೆ ಉತ್ತಮವೆಂಬ ಸಲಹೆಯೂ ಇದೆ ಎಂದು ತಿಳಿದು ಬಂದಿದೆ.

ಡೆಪ್ಯೂಟಿ ಸ್ಪೀಕರ್ ಆಗಲು ಮಾಮನಿ ಪ್ರಯತ್ನ ಮುಂದುವರಿಸಿದ್ದರೆ ಶಾಸಕರಾದ ಕುಮಾರ್ ಬಂಗಾರಪ್ಪ, ಎಸ್. ಅಂಗಾರ ಕೂಡ ಯತ್ನ ನಡೆಸುತ್ತಿದ್ದಾರೆ. ಆದರೆ, ಉಪ ಸಭಾಧ್ಯಕ್ಷರ ಚುನಾವಣೆಗೆ ಸೋಮವಾರದ ಹೊತ್ತಿಗೆ ಅಧಿಸೂಚನೆ ಹೊರಬೀಳಲಿದೆ. ಬಹುತೇಕ ಜ್ಞಾನೇಂದ್ರ ಅವರನ್ನೇ ಆಯ್ಕೆ ಮಾಡುವ ನಿರೀಕ್ಷೆಯಿದೆ ಎಂದು ಹೇಳಲಾಗುತ್ತಿದೆ.